Regd No BG 155 12-11-1969

SATYAVADI Daily, MYSORE 4 ☆ 53 rd Year of Publication

శ్రీ సత్యనారాయణ
బినిఫిట్ స్కీం
(చాముండేశ్వరి టాకీస్ కట్టడ)
203, సయ్యాజిరావ్ రస్తే,
మైసూరు-1
మేల్కండ యోజనేగే
ఇందే చందాదారరాగిరి
అదర ఫలవన్ను పడెయిరి



Golden
Jubilee
Celebrated
Paper

స్థాపకరు: ఖరమ్ పీరభ్తేదార్ ఎం. వి. సుబ్బరావ్ సంపాదక : ధర్మప్రచారనిరత ఎం. ఎస్. కృష్ణ రావ్ [2 పైసె

హೊಸ ನಾಯಕನು ಆರಿಸುವಂತೆ ಕಾಂಗ್ರೆಸ್ ಪಕ್ಷಕ್ಕೆ ಸೂಚನೆ

25 ಭಾಷೆಗಳಲ್ಲಿ ಪ್ರಕಟಣೆ

ಸಿಕ್ಖರ ಪವಿತ್ರಗ್ರಂಥ ಜಪ್ಜಿ ಸಾಹಿಬ್ ಚೀನಿ, ಇಟಲಿ, ಸ್ಪೇನ್, ರಷ್ಯ, ಫ್ರೆಂಚ್, ಇಂಡೋನೇಷಿಯ ಭಾಷೆಗಳೂ ಸೇರಿ 25 ಭಾಷೆಗಳಲ್ಲಿ ಪ್ರಕಟವಾಗುತ್ತಿದೆ ಎಂದು ನವದೆಹಲಿ ವಾರ್ತೆ. ಇದಕ್ಕೆ 2 ಲಕ್ಷ ರೂ ವೆಚ್ಚ ತಗಲುವುದೆಂದು ಗುರುದ್ವಾರ ಪ್ರಬಂಧಕ ಸಮಿತಿ ಕಾರ್ಯದರ್ಶಿ ತಿಳಿಸಿದ್ದಾರೆ.

★

ವಿಮಾ ಸಂಸ್ಥೆ

68-69 ರಲ್ಲಿ ಜೀವ ವಿಮಾ ಸಂಸ್ಥೆಯ ವಹಿವಾಟು ರೂ. 929.35 ಕೋಟಿ. ಹೋದ ವರ್ಷಕ್ಕಿಂತ ರೂ. 54.75 ಕೋಟಿ ಹೆಚ್ಚು.

★

ನಕ್ಸಲಿಗಳ ಸಾವು

ಕೋಕವಾಡಾ ಪಟ್ಟಗಳ ಹತ್ತಿರ ನಕ್ಸಲಿಗಳಿಗೂ ಪೋಲೀಸರಿಗೂ ಆದ ಘರ್ಷಣೆಯಲ್ಲಿ 3 ನಕ್ಸಲಿಗಳು ಕೊಲ್ಲಲ್ಪಟ್ಟರು.

○

ಹೊಸಬರ ನೇಮಕ

ಪಾಕೀಸ್ತಾನ ಆಕ್ರಮಿತ ಕಾಶ್ಮೀರದ ಭಾಗಕ್ಕೆ ಅಧ್ಯಕ್ಷ ಯಾಹ್ಯ ಖಾನರು ಸೇನಾಧಿಕಾರಿ ಅಬ್ದುಲ್ ರಹಮಾನ್‌ರನ್ನು ಹೊಸ ಅಧ್ಯಕ್ಷರನ್ನಾಗಿ ನೇಮಿಸಿರುವರು.

★

ಗೋಪಾಲ್ಕರ ಸ್ವಾಗತ

ಮಾರ್ಕ್ಸಿಸ್ಟರ ನಾಯಕರಾದ ಶ್ರೀ ಎ. ಕೆ. ಗೋಪಾಲ್‌ರವರು ತ್ರಿಚೂರಿನಲ್ಲಿ ನಿನ್ನೆ ಹೇಳಿಕೆಯಿತ್ತು, ಕಾಂಗ್ರೆಸಿನಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಸ್ವಾಗತಿಸಿದರು. ಇದು ಸಮಾಜವಾದಕ್ಕೆ ಸಹಕಾರಿ ಎಂದು ತಿಳಿಸಿದರು.

ಅಧ್ಯಕ್ಷರ ನಿರಾಕರಣೆ

ಶಿವಮೊಗ್ಗ ಪೌರಸಭೆ ಹಣ 4 ತಿಂಗಳ ಹಿಂದೆ ಬ್ಯಾಂಕಿನಲ್ಲಿ ರೂ 3.5 ಲಕ್ಷ ಇದ್ದುದು ಈಗ ರೂ. 30 ಸಾವಿರ ಮಾತ್ರ ಇದೆ. ಪೌರಸಭೆಯ ಸಂಯುಕ್ತ ರಂಗದ್ರ ಸದಸ್ಯರು ಬ್ಯಾಂಕು ಪಾಸ್ ಬುಕ್ ಮತ್ತು ಸಂಬಂಧಿಸಿದ ಕಾಗದ ಪತ್ರಗಳನ್ನು ಹಾಜರ್ಮಾಡಲು ಅಧ್ಯಕ್ಷರಿಗೆ ತಿಳಿಸಿದರು. ಆದರೆ ಆರ್ಥಿಕ ಕಾಗದ ಪತ್ರಗಳನ್ನು ಹಾಜರ್ಮಾಡಲು ಅಧ್ಯಕ್ಷರು ನಿರಾಕರಿಸಿದರು.

★

ಅಣು ಆಯುಧ

ಅಣು ಶಸ್ತ್ರಾಸ್ತ್ರ ಅಮೆರಿಕಾದಲ್ಲಿ ತಯಾರಿಸಲ್ಪಟ್ಟು ದಾಸ್ತಾನಿರುವುದು ಹಲವತ್ತು ಸಾವಿರವೆಂದು ಅಮೆರಿಕಾದಪತ್ರಿಕೆಯೊಂದು ಪ್ರಕಟಿಸಿದೆ.

★

ಆಕ್ರಮ ಸಾರಾಯಿ ವಶ

ಗೋವಾದಿಂದ ಶಿವಮೊಗ್ಗಾಕ್ಕೆ ಅಕ್ರಮವಾಗಿ ಸಾಗುತ್ತಿದ್ದ 1414 ಶೀಸೆ ಸಾರಾಯನ್ನು ಪೋಲೀಸ್ ಅಧಿಕಾರಿಗಳು ವಶಪಡಿಸಿಕೊಂಡರು.

●

ಮೂರು ಮಕ್ಕಳ ಜನನ

ಮೂದಾರು ಗ್ರಾಮದಲ್ಲಿ ಕಾರ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ಒರ್ವ ಮಹಿಳೆ ಮೂವರುಮಕ್ಕಳನ್ನು ಪ್ರಸವಿಸಿರುವಳೆಂದು ಮಂಗಳೂರಿನಿಂದ ವಾರ್ತೆ ಬಂದಿದೆ.

★

ನಕ್ಸಲಿಗಳ ಬಂಧನ

ದಾಂಡುಗೆಡ್ಡಾ ಪಟ್ಟಗಳಲ್ಲಿ 26 ನಕ್ಸಲಿಗಳನ್ನು ಪೋಲೀಸರು ಬಂಧಿಸಿರುವರೆಂದು ಹೈದರಾಬಾದ್ ವಾರ್ತೆ ತಿಳಿಸುತ್ತದೆ.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಆವರನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿತೆಗೆದುಹಾಕಿತೆಂದು ವರದಿ ಆಗಿದೆ. ನೂತನ ನಾಯಕರನ್ನು ಚುನಾಯಿಸುವಂತೆ ಸಮಿತಿ ಸಂಸತ್ ಕಾಂಗ್ರೆಸ್ ಪಕ್ಷಕ್ಕೆ ಸೂಚಿಸಿದೆ.

★

ಒಂದು ಸಹಸ್ರ ಗಲಾಬಿ ಗಿಡ

ನವದೆಹಲಿ— ಇದೇ ನವೆಂಬರು 14 ರಂದು ನಡೆಯುವ ನೆಹರೂರವರ ಎಂಭತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಒಂದು ಸಹಸ್ರ ಗುಲಾಬಿ ಸಸಿಗಳನ್ನು ಒಂದೇ ವೇಳೆಗೆ ಶಾಂತಿವನದಲ್ಲಿ ನೆಡಲಾಗುವುದು.

★

ಪೌರಸಭೆ ನಿರ್ಧಾರ

ಹ್ಯಾಪಿ ಕಾರ್ನರ್‌ಗೆ ನೀಡಿದ್ದ ಲೈಸನ್ಸನ್ನು ಅನಂತಪುರ ಪೌರಸಭೆ ರದ್ದುಪಡಿಸಲು ನಿರ್ಧರಿಸಿತು. ಲೈಸನ್ಸು ಕೊಡುವ ಕುರಿತು ಪೋಲೀಸು ಮತ್ತು ಆರೋಗ್ಯ ಇಲಾಖೆ ನಿರಾಕರಿಸುವ ಶಿಫಾರಸು ಮಾಡಿದ್ದಿತು.

○

ಸಾದರ ಸ್ವೀಕಾರ

ಬೆಳಗಾಂನ ಪ್ರಖ್ಯಾತ ದ್ವಿವಾರೆ ಪತ್ರಿಕೆ " ಸಂದೇಶ " ದ ದೀಪಾವಳಿ ಸಂಚಿಕೆಯನ್ನು ಸಾದರದಿಂದ ಸ್ವೀಕರಿಸಿದ್ದೇನೆ. ತ್ರಿವರ್ಣ ಚಿತ್ರದ ಸುಂದರವಾದ ಮುಖಪತ್ರವಿದ್ದು, ಆಕರ್ಷಣೀಯ, ಮನರಂಜಕವಾದ ಅನೇಕ ಕಥೆ, ಕವನಗಳಿಂದ ಕೂಡಿದ್ದಾಗಿದೆ ಸರ್ವ ಕನ್ನಡಿಗರ ಹೊಂದ ಬಹುದಾದ ಸಂಚಿಕೆ ಇದು. ಪುಟಗಳ ಸಂಖ್ಯೆ 124. ಬೆಲೆ ರೂ. 1 ಮಾತ್ರ.

○ ಗೂಡ್ಸ್‌ರೈಲು ಒಂದು ವ್ಯಾನಿಗೆ ಡಿಕ್ಕಿ ಹೊಡೆದು 8ನುಂಪಿ ಸತ್ತರೆಂದು ಭೂಪಾಲಿನಿಂದ ವಾರ್ತೆ ಬಂದಿದೆ

ಪ್ರಯೋಜನವಾಗಲಿಲ್ಲ

ನವದೆಹಲಿ— ನಿನ್ನೆ ಕಾಂಗ್ರೆಸ್ ಮುಖ್ಯ ಮಂತ್ರಿಗಳು ಎರಡು ಗುಂಪಿನಲ್ಲಿ ಐಕ್ಯತೆ ಉಂಟುಮಾಡುವ ಆಶಯದಿಂದ 7 ಗಂಟೆ ಭಾರಿ ಚರ್ಚೆ ನಡೆಸಿದರೂ ಯಾವ ಐಕ್ಯ ಸೂತ್ರ ನಿರ್ಧರಿಸಲಿಲ್ಲ, ಅವಶ್ಯಕತೆಬಿದ್ದರೆ ಮತ್ತೆ ಸೇರಬಹುದು.

●

ಭಾರತದ ಆಕ್ಷೇಪಣೆ

ವಿಶ್ವಸಂಸ್ಥೆ— ಭಾರತವು ಮುಸ್ಲಿಂ ಜನಾಂಗದ ಪರವಾಗಿ ರಾಬಟ್ ಸಮ್ಮೇಳನ ಮಾತನಾಡುವ ಹಕ್ಕು ಬಗ್ಗೆ ಭಾರತವು ಆಕ್ಷೇಪಿಸಿತು.

●

ರೂ 115000 ವಶ

ತಿರುಚಿ— ರೂ. 100 ರ ನೋಟುಗಳು ಒಟ್ಟು ರೂ 115000 ಭಾರತದ ಹಣವನ್ನು ಕಸ್ಟಂಸ್‌ರವರು ಇಬ್ಬರು ಯುವಕರಿಂದ ವಶಪಡಿಸಿಕೊಂಡು ಅವರನ್ನು ಈ ಬಗ್ಗೆ ಪ್ರಶ್ನಿಸಲು ಹಿಡಿದಿಟ್ಟಿರುವರು.

★

ಲೋಕಸಭೆಗೆ ಠರಾವು

ನವದೆಹಲಿ— ರಾಬಟ್ ವಿಚಾರವಾಗಿ ಮತ್ತು ಮಂತ್ರಿ ಜನಜೀವನರಾಂ ಆದಾಯ ತೆರಿಗೆ ಪಟ್ಟು ಕೊಡದಿದ್ದ ವಿಷಯವಾಗಿ ಲೋಕಸಭೆಗೆ ಪಿಎಸ್ಪಿ ಠರಾವು ಕಳಿಸಿದೆ.

○

ಬ್ಯಾಂಕು ಡಿಪಾಜಿಟ್

ನವದೆಹಲಿ— ನಾಲ್ಕನೇ ಯೋಜನೆಯ ಕಡೆಯಲ್ಲಿ ಎಲ್ಲಾ ವಾಣಿಜ್ಯ ಬ್ಯಾಂಕುಗಳಲ್ಲೂ ಒಟ್ಟು ರೂ 10000 ಕೋಟಿ ಡಿಪಾಜಿಟ್ ಇರುವದೆಂಬ ನಿರೀಕ್ಷೆ ಇದೆ — ಈಗ ರೂ 4700 ಕೋಟಿ ಇದೆ.

★ ಸೋಮವಾರ ಇಟಾರ್ಸಿ ರೈಲ್ವೆ ಸ್ಟೇಷದಲ್ಲಾ ರೈಲ್ವೆ ಅಪಘಾತದಲ್ಲಿ 10 ಮಂದಿ ಸತ್ತರು.

"Bank Road Bahusar – A Fair Price Shop in Actual Practice"

ಹೊಸ ಜಹಗೀರು ಸೃಷ್ಟಿ

ಜಯಸಾಲ್ಮರ್, ಬಿಕಾನೀರ್, ಪರಮಾರ್ ಜಿಲ್ಲೆಗಳಲ್ಲಿ ಟ್ಯೂಬ್ ಭಾವಿಗಳನ್ನು ತೋಡಲು ಇಚ್ಛಿಸುವವರಿಗೆ 50 ಎಕರೆ ಭೂಮಿಯನ್ನು ಉಚಿತವಾಗಿ ಕೊಡಲಾಗುವುದೆಂದೂ, ಮರಳು ಕಾಡುಗಳ ಅಭಿವೃದ್ಧಿಗೆ ಉಚಿತ ಭೂಮಿ ಕೊಡುವುದು ಒಂದೇ ಮಾರ್ಗವೆಂದೂ ರಾಜಾಸ್ಥಾನದ ಮುಖ್ಯ ಮಂತ್ರಿ ಶ್ರೀ ಮೋಹನ್ ಲಾಲ್ ಸುಖಾಡಿಯಾ ತಿಳಿಸಿದುದಕ್ಕೆ ಎಸ್ ಎಸ್ ಪಿ ಪಕ್ಷವು ಬಿಕೆಡಿತೀವ್ರವಾಗಿ ವಿರೋಧಿಸಿದೆ. ಇದು ಜನತಾ ವಿರುದ್ಧ ಕ್ರಮವೆಂದು ಹೊಸ ಜಹಗೀರುದಾರರನ್ನು ಸೃಷ್ಟಿಸುವುದಾಗುವುದೆಂದೂ ಆ ಪಕ್ಷಗಳ ಸದಸ್ಯರು ತಿಳಿಸಿದರು. ಆದರೆ ಸ್ವತಂತ್ರ, ಜನ ಸಂಘದವರು ಬೆಂಬಲಿಸಿ, ಮರಳು ಕಾಡಿನಲ್ಲಿ ಕುಡಿಯುವ ನೀರು ಒದಗಿಸುವವರಿಗೆ ನೂರು ಎಕರೆ ಭೂಮಿಯೂ ಕಡಿಮೆ ಎನ್ನುವರು.

ಸ್ತ್ರೀಧರ್ಮ — ಸತ್ಯ ಸಾಯಿಬಾಬಾರವರ ಬೋಧನೆ

ಸ್ತ್ರೀಯರು ಯಾವ ನಿಶ್ಚೆಯಲ್ಲಿ ಉತ್ತೀರ್ಣರಾದಾಗ್ಯೂ, ಯಾವ ಡಿಗ್ರಿ ಪಡೆದರೂ, ಎಂಥಹ ಉತ್ತಮ ಪದವಿಯಲ್ಲಿರುವ ಸತಿಯು ತನಗೆ ದ್ರೋಹಿತರೂ ಅಥವಾ ತಾನೇ ಎಂತಹ ಪದವಿಯಲ್ಲಿದ್ದಾಗ್ಯೂ, ಸುಗುಣಗಳನ್ನೇ ತನ್ನ ಸೌಂದರ್ಯದಂತೆಯೂ, ಲಜ್ಜೆಯನ್ನೇ ತನ್ನ ಪ್ರಾಣದಂತೆಯೂ, ತನ್ನ ಸತ್ ಪ್ರವರ್ತನೆಯನ್ನೇ ತನ್ನ ನಿತ್ಯ ಕರ್ಮ ಕಾರ್ಯದಂತೆಯೂ ನೆನೆದು, ಪಾಪ ಭೀತಿಯನ್ನೂ ದೈವ ಭೀತಿಯನ್ನೂ ತನ್ನ ಹೃದಯದಲ್ಲಿ ಭಿತ್ತಿ, ಅವುಗಳನ್ನು ಅಭಿವೃದ್ಧಿ ಪಡಿಸಿಕೊಂಡು, ಸ್ತ್ರೀ ಸಹಜ ಸ್ವಭಾವವನ್ನು ತನ್ನಲ್ಲಿ ದೃಢಪಡಿಸಿಕೊಂಡು, ಸ್ತ್ರೀಧರ್ಮವನ್ನು ಧಾರ್ಮಿಕ, ನೈತಿಕ ಮತ್ತು ಭೌತಿಕ ಮಾರ್ಗಗಳೆಲ್ಲೆಯೂ ಮತ್ತು ಮನೋವಾಕ್ಕಾಯಗಳಲ್ಲಿಯೂ ತನ್ನ ಸತ್ಯಧರ್ಮವನ್ನು ನಡೆಸಿ ತೋರಿಸಿ ಸಮಸ್ತ ವಿದ್ಯೆಗಳ ಸಾರವೆಲ್ಲಾ ತಾವುಗಳೇ ಎಂದು ದೃಢವಾಗಿ ಗ್ರಹಿಸಿ, ಈ ರೀತಿಯಾಗಿ ಪತಿವ್ರತಾ ಧರ್ಮವನ್ನು ಸಾಧಿಸುವುದಕ್ಕೆ ಸ್ತ್ರೀಯರಿಗೆ ಅತೀ ಮುಖ್ಯವಾದ ಧರ್ಮವು ಅವರ ಜನ್ಮಕ್ಕೆ ಕಾರಣವೇ ಈ ಧರ್ಮವು.

ದೇಶದ ಹಿತಕ್ಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಸಚ್ಚು ಸೇರಿ ವರ್ಷಕ್ಕೆ ರೂ.10-0)
ಸೋಮವಾರ ಸಂಚಿಕೆ ವರ್ಷಕ್ಕೆ ರೂ.7

SHAKTI
SUDHA
A Superb Tonic

ವುಡ್‌ಲಾಂಡ್ ಜಯಪ್ಪನ 5ನೇ ವಾರ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶತೀಶ್ವರ್ ಬಬೀತಾ ಜಾನಿವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೇರಾ — ಅಮೋಘ 3ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ತುಣ್ಬೆವನ
ಪಾತ್ರ— ಎ ವಿ ಎಂ ರಾಜ್, ಸಾಹುಕಾರ್ ಜಾನಕಿ, ಸೂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ.
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata
M. S. Krishna Rao (Proprietor) at the Satyavadi Press
Chamarajanagar, Mysore